ಬುಲ್ವೆ ಬುಲ್ವೆ ನದಿಯಾಚೆ ಹುಲ್ಲಿನ ಮನೆಯತ್ತ ನೋಡಿದರು. ಅಲ್ಲಿ ವೀಡಾ ಇರಲಿಲ್ಲ. ಅವರು ಅಲ್ಲಿಯೇ ಕುಳಿತು ಚರಮಗೀತೆಯೊಂದನ್ನು ಹಾಡಿದರು. ವೀಡಾನನ್ನು ಇನ್ನು ನೋಡುವುದಿಲ್ಲ ಎಂಬುದು ಅವರಿಗೆ ಮನನವಾಯಿತು. ವಿಧವೆಯರಂತೆ ಅವರಿಬ್ಬರೂ ತಮ್ಮ ತಲೆಗೆ ಒದ್ದೆ ಮಾಡಿದ ಬಿಳಿಯ ಬೂದಿಯನ್ನು ಲೇಪಿಸಿಕೊಂಡರು;

ಬಯಲು, ಮತ್ತೆ ತಮ್ಮನ್ನು ವಂಚಿಸಿದ ಅದೇ ತರಹ ನೀರಿನ ಹಾಸು. ಅದೇನು ಎಂಬುದು ಅವರಿಗೆ ತಿಳಿಯಲಿಲ್ಲ, ಆದರೆ ಅಲ್ಲಿ ನೀರಿಲ್ಲವೆಂಬುದು ಖಚಿತವಾಗಿತ್ತು.

ಸಂಜೆಯ ಸಮಯಕ್ಕೆ ಸರಿಯಾಗಿ ಅವರು ದೊಡ್ಡ ನದಿಯ ಬಳಿ ಬಂದರು. ಅಲ್ಲಿ ಪೆಲಿಕನ್ ಗೂಲಾಯ್ಯಾಲೀ (ಪೆಲಿಕನ್ ಹಕ್ಕಿ) ತನ್ನ ದೋಣಿಯೊಡನೆ ಹಾಜರಿದ್ದ. ವೀಡಾ ತಾವು ಮೂವರನ್ನೂ ನದಿ ದಾಟಿಸುವಂತೆ ಕೇಳಿದ. ಗೂಲಾಯ್ಯಾಲೀ ಉತ್ತರಿಸಿದ,

"ನನ್ನ ದೋಣಿ ಚಿಕ್ಕದು. ಅದರಲ್ಲಿ ಒಬ್ಬ ಪ್ರಯಾಣಿಕನಿಗೆ ಮಾತ್ರ ಪ್ರವೇಶ. ನಿಮ್ಮನ್ನು ಒಬ್ಬೊಬ್ಬರನ್ನಾಗಿ ಅತ್ತ ಕೊಂಡೊಯ್ಯುತ್ತೇನೆ."

ಅವನು ಮೊದಲಿಗೆ ವೀಡಾ ಬರಲಿ ಎಂದು ತಿಳಿಸಿದ. ಬುಲ್ವೆ ಬುಲ್ವೆ ಅದಕ್ಕೆ ಒಪ್ಪಿಕೊಂಡರು. ಕಾರಣ, ಅವನು ಮೊದಲು ಹೋಗಿ ಅಲ್ಲಿದ್ದ ಉದ್ದನೆಯ ಹುಲ್ಲಿನಲ್ಲಿ ಮೂವರಿಗೂ ಬಿಡಾರ ಕಟ್ಟಬಹುದು.

ವೀಡಾನನ್ನು ಬಿಟ್ಟುಬಂದವನೇ ಗೂಲಾಯ್ಯಾಲೀ ದೋಣಿಯನ್ನು ಲಂಗರುಹಾಕಿ, ಅಲ್ಲಿಯೇ ಹಳೆ ಬೂದಿಯ ಪಕ್ಕ ಕುಳಿತಿದ್ದ ಬುಲ್ವೆ ಬುಲ್ವೆ ಅವರ ಬಳಿ ಬಂದ.

"ಈಗ ನೀವಿಬ್ಬರೂ ನನ್ನ ಮನೆಗೆ ನಡೆಯಿರಿ. ಇಲ್ಲೇ ಈ ತಿರುವಿನತ್ತ ನನ್ನ ಮನೆ ಇದೆ. ವೀಡಾ ಮತ್ತೆ ಇಲ್ಲಿ ಬರಲಾರ. ನೀವು ನನ್ನ ಜೊತೆ ಸಂಸಾರ ಮಾಡಿ. ನಾನು ಮೀನು ಹಿಡಿದು ನಿಮಗೆ ಕೊಡುತ್ತೇನೆ. ಈಗಾಗಲೇ ನನ್ನ ಮನೆಯಲ್ಲಿ ಮೀನು ಬೇಯುತ್ತಿದೆ. ಇದಲ್ಲದೆ ನನ್ನ ಬಳಿ ವ್ಯೆರೀ(ದೋಣಿಯಾಕಾರದ ಚಿಕ್ಕ ತೊಗಟೆ)ಗಟ್ಟಲೆ ಜೇನುತುಪ್ಪವಿದೆ. ಡರೀ (ಹುಲ್ಲಿನ ಬೀಜ) ಇದೆ. ರೊಟ್ಟಿ ಮಾಡಬೇಕು ಅಷ್ಟೆ. ವೀಡಾ ಬಳಿ ಏನಿದೆ ನಿಮಗೆ ಕೊಡುವುದಕ್ಕೆ? ಅವನು ಹುಲ್ಲಿನಲ್ಲಿ ನ್ಯುನೂಸ್ (ಹುಲ್ಲಿನಲ್ಲಿ ಕಟ್ಟಿದ ಗೂಡು) ಬೀಡು ಕಟ್ಟುತ್ತಿದ್ದಾನೆ, ಅಷ್ಟೆ.''

"ಅದೆಲ್ಲ ಬೇಡ. ನಮ್ಮನ್ನು ವೀಡಾನ ಬಳಿಗೆ ಒಯ್ಯಿ."

"ಸಾಧ್ಯವೇ ಇಲ್ಲ." ಎಂದವನೇ, ಮುಂದಕ್ಕೆ ಹೆಜ್ಜೆ ಹಾಕಿ ಗೂಲಾಯ್ಯಾಲೀ ಅವರಿಬ್ಬರನ್ನು ಹಿಡಿಯಹೋದ.

ಬುಲ್ವೆ ಬುಲ್ವೆ ತಕ್ಷಣ ಬಗ್ಗಿ ತಮ್ಮ ಕೈಗಳಲ್ಲಿ ಅಲ್ಲಿದ್ದ ಬೂದಿಯನ್ನು ಬಾಚಿ ಅವನತ್ತ ಎಸೆದರು. ನಂತರ ಬೊಗಸೆ ಬೊಗಸೆ ತುಂಬಾ ಬೂದಿಯನ್ನು ಅವನ ಮೇಲೆ ಹಾಕಿದರು. ಅವನ ಮೈಯೆಲ್ಲಾ ಮುಚ್ಚಿಹೋಯಿತು. ಅವನು ತನ್ನ ಕೈಗಳಿಂದ ಬೂದಿಯನ್ನು ಪಕ್ಕಕ್ಕೆ ಸರಿಸುತ್ತಾ ಹೋದ. ಅವನಿಗೆ ಏನೂ ಕಾಣದಾಯಿತು. ಇದೇ ಸಮಯವೆಂದು ಬುಲ್ವೆ ಬುಲ್ವೆ ಅಲ್ಲಿಂದ ನದಿಯ ತೀರಕ್ಕೆ ಓಡಿದರು.